ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾಳಿ

ಸಿ.ಸಿ ನಂಬರ್.1915/2019

ಪಿರ್ಯಾದುದಾರರು ಃ- ರಾಜ್ಯ - ಹೊನ್ನಾಳಿ ಅರಕ್ಷಕ ಠಾಣೆ

ವಿರುದ್ಧ

ಆರೋಪಿಃ- 1. **ಕರಿಬಸಪ್ಪ ಕೆ ಜಿ** ಬಿನ್ ಕೊಟ್ರಪ್ಪ,
53 ವರ್ಷ,
ವಾಸಃ ಹೊಳೆಸಿರಿಗೆರೆ ಗ್ರಾಮ,
ಹರಿಹರ ತಾಲ್ಲೂಕು , ದಾವಣಗೆರೆ ಜಿಲ್ಲೆ .

**ಆಪಾದನೆ**

ದಿನಾಂಕಃ 26-05-2019 ರಂದು ಸಂಜೆ 7.00 ಗಂಟೆ ಸುಮಾರಿಗೆ ಹೊನ್ನಾಳಿ ಪೋಲಿಸ್ ಠಾಣಾ ಸರಹದ್ದಿನ ನರಸಗೊಂಡನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಹೊನ್ನಾಳಿ - ಹರಿಹರ ರಸ್ತೆಯಲ್ಲಿ ಹೊನ್ನಾಳಿ ಕಡೆಯಿಂದ ಹರಿಹರ ಕಡೆಗೆ 1 ನೇ ಆರೋಪಿಯಾದ ನೀವು 2 ನೇ ಆರೋಪಿತನ ಬಾಬ್ತು ಕೆಎ-17-ಇವೈ-2153 ನೇ ಬೈಕಿನಲ್ಲಿ ಚಾಸಾ-11 ಮಲ್ಲಮ್ಮರವರನ್ನು ಕೂರಿಸಿಕೊಂಡು ಅತೀವೇಗ ಮತ್ತು ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಹೊನ್ನಾಳಿ ಕಡೆಯಿಂದ ಹರಿಹರ ಕಡೆಗೆ ನಾಗರಾಜ ಎಸ್.ಹೆಚ್ ರವರು ಚಲಾಯಿಸಿಕೊಂಡು ಹೋಗುತ್ತಿದ್ದ ಎಂಜಿನ್ ನಂಬರ್ - ಒ.ಜಿ.3 ಎ.ಜಿ 2513241,ಚಾಸ್ಸಿಸ್ ನಂಬರ್ ಎಂ.ಡಿ.626 ಬಿ.ಜಿ.3.ಜಿ.2 ಎ 20921 ನೇ ಸ್ಕೂಟಿಗೆ ಹಿಂಬದಿಯಿಂದ ಅಪಘಾತಪಡಿಸಿರುತ್ತೀರಿ. ಆ ಮೂಲಕ 1 ನೇ ಆರೋಪಿಯಾದ ನೀವು ಭಾ .ದಂ. ಸಂ. ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

2. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಚಾಸಾ-11 ಮಲ್ಲಮ್ಮ ರವರಿಗೆ ಎಡ ಕಣ್ಣಿನ ಹತ್ತಿರ, ಎಡ-ಕೈ ತೋಳು ಮತ್ತು ಇತರೇ ಕಡೆ ಸಾಮಾನ್ಯ ಸ್ವರೂಪದ ಗಾಯಪಡಿಸಿರುತ್ತೀರಿ. ಆ ಮೂಲಕ 1 ನೇ ಆರೋಪಿಯಾದ ನೀವು ಭಾ .ದಂ. ಸಂ. ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

3. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಅಪಘಾತಪಡಿಸಿದ ಪರಿಣಾಮ ಸದರಿ ಸ್ಕೂಟಿಯ ಸವಾರ ನಾಗರಾಜ ಎಸ್.ಎಚ್ ರವರ ತಲೆ , ಎಡ ಕಣ್ಣು , ಎದೆ ಮತ್ತು ಇತರೇ ಕಡೆ ಪೆಟ್ಟು ಬಿದ್ದು ಚಿಕಿತ್ಸೆ ಫಲಕಾರಿಯಾಗದೇ ದಿಃ 25-09-2019 ರಂದು ರಾತ್ರಿ 8.45 ಗಂಟೆಗೆ ಮೃತಪಟ್ಟಿರುತ್ತಾರೆ. ಆ ಮೂಲಕ 1 ನೇ ಆರೋಪಿಯಾದ ನೀವು

ಭಾ .ದಂ. ಸಂ. ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

4. ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ 1 ನೇ ಆರೋಪಿಯಾದ ನೀವು ಚಾಲನಾ ಪರವಾನಿಗೆ ಇಲ್ಲದೇ ಇದ್ದರು ಸಹ 2 ನೇ ಆರೋಪಿತನ ಬಾಬ್ತು ಕೆಎ-17-ಇವೈ-2153 ನೇ ಬೈಕನ್ನು ಚಲಾಯಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ. 181 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರಃ ಆ-1)

2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಆ-1)

( ಈ ಮೆಲಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

ಸ್ಥಳ : ಹೊನ್ನಾಳಿ
ದಿನಾಂಕಃ 30-08-2023

(ಮಂಜುನಾಥ ಆರ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಹೊನ್ನಾಳಿ .

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಹೊನ್ನಾಳಿ

ಸಿ.ಸಿ ನಂಬರ್.1915/2019

ಪಿಯಾರ್ದುದಾರರು ಃ- ರಾಜ್ಯ - ಹೊನ್ನಾಳಿ ಅರಕ್ಷಕ ಠಾಣೆ

ವಿರುದ್ಧ

ಆರೋಪಿಃ- 2. **ಕೊಟ್ರೇಶ್ ಕೆ ಜಿ** ಬಿನ್ ಕರಿಬಸಪ್ಪ ಕೆ.ಜಿ,
21 ವರ್ಷ,
ವಾಸಃ ಹೊಳೆಸಿರಿಗೆರೆ ಗ್ರಾಮ,
ಹರಿಹರ ತಾಲ್ಲೂಕು , ದಾವಣಗೆರೆ ಜಿಲ್ಲೆ .

**ಆಪಾದನೆ**

ದಿನಾಂಕಃ 26-05-2019 ರಂದು ಸಂಜೆ 7.00 ಗಂಟೆ ಸುಮಾರಿಗೆ 2 ನೇ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-17-ಇವೈ-2153 ನೇ ಬೈಕನ್ನು ಚಾಲನಾ ಪರವಾನಿಗೆ ಇಲ್ಲದ 1 ನೇ ಆರೋಪಿಗೆ ಚಲಾಯಿಸಲು ಕೊಟ್ಟಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ. 180 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯತೆಯಲ್ಲಿ ಎಸಗಿರುತ್ತೀರಿ.

1. ನಿಮಗೆ ಈಗ ಓದಿ ಹೇಳಿದ ಆಪಾದನೆ ತಿಳಿಯಿತೆ?

ಉತ್ತರಃ ಆ-2)

2 ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಉತ್ತರಃ ಆ-2)

( ಈ ಮೇಲಿನ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆತನಿಗೆ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಳ್ಳಲಾಯಿತು.

ಸ್ಥಳ ಃ ಹೊನ್ನಾಳಿ
ದಿನಾಂಕಃ 30-08-2023

(ಮಂಜುನಾಥ ಆರ್.)
ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಹೊನ್ನಾಳಿ .

Case is called out, Accused No.2 is present. Charge-sheet papers are furnished. Accused No.2 submits that he wants to plead guilty. The consequences of admitting the offences are explained to the accused No.2 . After knowing its consequences they agreed to plead guilty. The substance of plea is recorded and the same is read over and explained to accused No.2 in Kannada language. Accused pleaded guilty. Accordingly, the accused No.2 is convicted U/s 252 of Cr.P.C. for the offences punishable U/s 180 of IMV ACT.

The accused No.2 is sentenced to pay a fine of **Rs.1000/-** for the offence punishable U/s 180 of IMV ACT. In default S.I. for 15 days.

The accused No.2 submits that he will remit the entire fine amount.

Office is directed to receive the fine amount. Accordingly case against accused No.2 is closed.